ಆ ನೆನಪುಗಳು ಜೊತೆಯಲ್ಲಿರುತ್ತವೆ ಎನ್ನುವುದಾದರೆ ಅವು ಅಮೂಲ್ಯವಾದವೇ ಅಲ್ಲವೆ? ಎನ್ನುವ ಧಾಟಿಯೊಂದು ಇಲ್ಲಿನ ಕವಿತೆಗಳನ್ನು ಜೀವಪ್ರೀತಿಯ ಲಹರಿಗಳಾಗಿಸಿವೆ. ಏಕಾಂತದ ನಿರೂಪಣೆಗಳಲ್ಲಿ ಸಾಮಾನ್ಯವಾಗಿ ನಾನು ಮತ್ತು ಅವಳು/ಅವನು ವಿರುದ್ಧ ಧ್ರುವಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಮೋಸಹೋದ, ಫಲಿಸದ ಸಂಬಂಧಗಳ ಚಿತ್ರ ತೀರ ಸಾಮಾನ್ಯ. ಆದರೆ, ಮುಕ್ತಾಯಕ್ಕನವರ ಗಜಲ್‌ಗಳು ಉದ್ದಕ್ಕೂ 'ನಾವು' ನೆಲೆಯನ್ನೇ ಕಾಯ್ದುಕೊಳ್ಳುತ್ತವೆ. ಕಳೆದ ಗಳಿಗೆಗಳ ಸಂಭ್ರಮವನ್ನು ಹೇಳ ಹೇಳುತ್ತಲೇ ಆ ಗಳಿಗೆಗಳಲ್ಲಿಯೇ ವಿದಾಯದ ಮುನ್ಸೂಚನೆಯೂ ಇತ್ತು ಎನ್ನುವುದನ್ನು ಮತ್ತೆ ಮತ್ತೆ ಇಲ್ಲಿನ ಗಜಲ್‌ಗಳು ಮನಗಾಣುತ್ತವೆ. ಸಂಬಂಧಗಳ 'ಜೀವಿತಾವಧಿ'ಯನ್ನು ನಿರ್ಧರಿಸುವ ಸಂಗತಿಗಳಾದರೂ ಯಾವುವು ಎನ್ನುವ ಉತ್ತರವಿಲ್ಲದ ಪ್ರಶ್ನೆಯನ್ನು ಸ್ವಗತದಂತೆ ಇಲ್ಲಿನ ಗಜಲ್‌ಗಳು ಹಾಕಿಕೊಳ್ಳುತ್ತವೆ. ಆದರೆ, ಅದಕ್ಕಾಗಿ 'ಅವನ'ನ್ನು ದೂಷಿಸುವ ಒಂದು ಕವಿತೆಯೂ ಇಲ್ಲಿಲ್ಲ. ಬದುಕಿನ ಗತಿಯೇ ಹೀಗೇನೋ ಎನ್ನುವ ಅರಿವಿನಲ್ಲಿ ಇಲ್ಲಿನ ಕವಿತೆಗಳು ಸಿಕ್ಕಿದ್ದನ್ನು ಸಂಭ್ರಮಿಸುತ್ತಾ, ಸಿಕ್ಕದಿರುವುದರ ಬಗ್ಗೆ ಮೌನದ ನಿಟ್ಟುಸಿರು ಬಿಡುತ್ತಾ ಹೋಗುತ್ತವೆ. ಆದರೆ, ಆ ಮೌನದ ನಿಟ್ಟುಸಿರು ಬದುಕನ್ನು ಬಿಸಾಡುವಂಥದ್ದಲ್ಲ, ನಿಟ್ಟುಸಿರಿನ ಆಚೆಗಿರುವ ಬದುಕನ್ನು ಅಪ್ಪಿಕೊಳ್ಳಲು ಹಾತೊರೆಯುವಂಥವು.

ಇಂಥ ಮನಃಸ್ಥಿತಿ ಬಂದಿರುವುದು ಮೂಲತಃ ಮುಕ್ತಾಯಕ್ಕ ಮನುಷ್ಯ ಮತ್ತು ಪ್ರಕೃತಿಯನ್ನು ಅಖಂಡವಾಗಿ ನೋಡುವುದರಿಂದ. ಪ್ರಕೃತಿಯ ಗತಿಚಕ್ರವು ನಿಲ್ಲುವಂಥದ್ದೇ ಅಲ್ಲ. ಅದು ಒಂದು ಗಳಿಗೆಯೂ ನಿಲ್ಲದ ಮುಂಪಯಣ, ಇರುವುದೇನಿದ್ದರೂ ತಾತ್ಕಾಲಿಕ ನಿಲುಗಡೆಗಳು. ವಿದಾಯದ ನೋವು ಬದುಕನ್ನು ಇನ್ನೂ ಉತ್ಕಟವಾಗಿ ಪರಿಭಾವಿಸಲು ಇರುವ ಒಂದು ವಾಹಕ. ಸಫಲ ಸಂಬಂಧ ಯಾರಿಗೆ ಬೇಡ? ಆದರೆ, ಅದು ಎಲ್ಲರ ತಟ್ಟೆಯ ಊಟವಲ್ಲ. ಇದು ಒಂದು ಮಗ್ಗುಲಾದರೆ, ಏಕಾಂತದ ಇದನ್ನೂ ಮೀರಿದ ಇತರ ಆಯಾಮಗಳನ್ನು ಈ ಸಂಕಲನ ಗುರುತಿಸುತ್ತಾ ಹೋಗುತ್ತದೆ. ಇಡೀ ಸಂಕಲನದ ಒಟ್ಟು ಚಿತ್ರವು ಏಕಾಂತವೆನ್ನುವುದು ಶಾಪವಲ್ಲ, ದುರಂತವಲ್ಲ, ನಮ್ಮ ಆಯ್ಕೆಯಾಗಿಲ್ಲದಿದ್ದಾಗಲೂ ಏಕಾಂತವು ನಾವು ದ್ವೇಷಿಸಬೇಕಾದ, ಕೊರಗುತ್ತಾ ಕಳೆಯಬೇಕಾದ ಸಂದರ್ಭವಲ್ಲ ಎನ್ನುವುದಾಗಿದೆ. ಮನುಷ್ಯ ಮೂಲತಃ ಏಕಾಂಗಿಯೇ ಅಲ್ಲವೆ, ಮಿಕ್ಕದ್ದೆಲ್ಲ ನಾವೇ ಜೋಡಿಸಿಕೊಳ್ಳಲು ಹಂಬಲಿಸುವ ಸಂಗತಿಗಳು. ಇದನ್ನು ಬದುಕಿನ ಪರಮ ಸತ್ಯವೆಂದು ಗ್ರಹಿಸಿದ ಕ್ಷಣದಿಂದ ಏಕಾಂತದ ಬದುಕೂ ಸಹನೀಯವಾಗಿ ಮಾತ್ರವಲ್ಲ, ಬಯಲು ಆಲಯಗಳ ವಿಸ್ತಾರದಲ್ಲಿ ನಮ್ಮನ್ನು ನಾವು ಬೆಸೆದುಕೊಳ್ಳುವುದು ಸಾಧ್ಯವಾಗುತ್ತದೆ.

ನಿನ್ನ ಮೊದಲ ಬಾರಿ ನೋಡಿದಾಗಲೆ/ ನನಗೆನಿಸಿತು/ ನೀನು ನನಗೆ ಅಪರಿಚಿತನೇನಲ್ಲ
ನಾನು,/ ಈ ಮುನ್ನ ನಿನ್ನ ಮೋಹಿಸಿದ್ದೇನೆ

............................

ಈ ಮುನ್ನ ನಾವು ಕೂಡಿ ಕಳೆದಿದ್ದೇವೆ/ ಎಲ್ಲಿ? ಎಲ್ಲಿ?/ ಓ! ಇನ್ನಾವುದೋ ಸಮಯದಲ್ಲಿ!/
ಅಗಣಿತ ಜನ್ಮಗಳಲಿ!

ಗಂಡು–ಹೆಣ್ಣಿನ ಸಂಬಂಧವನ್ನು ಕಾಲಾತೀತ ನೆಲೆಯಲ್ಲಿ ಗ್ರಹಿಸುವ ಈ ಕ್ರಮವೇ ಕವಿಗೆ ಸಂಬಂಧಗಳ ಅಕಾಲಿಕ ಮುಕ್ತಾಯವನ್ನು ಎದುರಾಗುವ ಸ್ಥೈರ್ಯವನ್ನು ನೀಡಿದೆ.

ಸಮುದ್ರ ತೀರ, ಕಾಲ ಕೆಳಗಿನ/ ಉಸುಕು ಜಾರಿ ಹೋಗುತ್ತದೆ/ ನೀರಿನೊಡನೆ/
ಸೂರ್ಯಾಸ್ತ